ಪುಮು/ಸಿಆರ್/84/2008-09

ಪುರಸಭಾ ಕಾರ್ಯಾಲಯ, ಪುತ್ತೂರು
ದಿನಾಂಕ: 27/07/2009

## ಟೆಂಡರ್ ಪ್ರಕಟಣೆ

ಪುತ್ತೂರು ಪುರಸಭಾ ಕಛೇರಿಯಲ್ಲಿ ಸಾರ್ವಜನಿಕ ಕುಂದುಕೊರತೆಗಳ ನಿವಾರಣೆಗಾಗಿಸ್ಥಾಪಿಸಲಾದ ಸಹಾಯವಾಣಿ (P.G.R) ಯನ್ನು ವಾರ್ಷಿಕ ದರ ಒಪ್ಪಂದದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ವಹಿಸಿಕೊಡಲು ಸರ್ಕಾರೇತರ ಸಂಘ ಸಂಸ್ಥೆ ಯಾ ಏಜೆನ್ಸಿ (NGO) ಯಿಂದ ಟೆಂಡರ್ ಕರೆಯಲಾಗಿದೆ. ಆಸಕ್ತಿಯುಳ್ಳವರು ದಿನಾಂಕ: 31/08/2009 ರಂದು ಸಂಜೆ ಗಂಟೆ 4.00 ರೊಳಗಾಗಿ ತಮ್ಮ ಟೆಂಡರನ್ನು ಈ ಕೆಳಗೆ ಸಹಿ ಮಾಡಿದವರಲ್ಲಿ ಅಥವಾ ಅವರಿಂದ ಹೊಂದಿದವರಲ್ಲಿ ನೀಡುವುದು ತಡವಾಗಿ ಬಂದ ದರಪಟ್ಟಿಯನ್ನು ಸ್ವೀಕರಿಸಲಾಗುವುದಿಲ್ಲ. ಟೆಂಡರ್ ತಿರಸ್ಕರಿಸುವ ಯಾ ಒಪ್ಪುವ ಅಧಿಕಾರ ಪುರಸಭೆಗೆ ಇರುತ್ತದೆ.

| | | |
|---|---|---|
| 1. ಇ.ಎಂ.ಡಿ. ಮೊಬಲಗು | : | 10,000/- |
| 2. ಟೆಂಡರು ಫಾರಂ ಬೆಲೆ | : | 250/- |
| 3. ಖಾಲಿ ಟೆಂಡರು ಫಾರಂಗೆ ಅರ್ಜಿ ಸಲ್ಲಿಸುವ ದಿನಾಂಕ | : | 24/08/09 ರಿಂದ 31/08/09 ರವರೆಗೆ |
| 4. ಖಾಲಿ ಟೆಂಡರು ಫಾರಂ ನೀಡುವ ದಿನಾಂಕ | : | 24/08/09 ರಿಂದ 31/08/09 ರವರೆಗೆ |
| 5. ಭರ್ತಿಗೊಳಿಸಿದ ಟೆಂಡರು ಫಾರಂ ಸಲ್ಲಿಸುವ ದಿನಾಂಕ | : | 31/08/2009 |

ಹೆಚ್ಚಿನ ಮಾಹಿತಿಗಾಗಿ ರಜಾದಿನ ಹೊರತುಪಡಿಸಿ ಕಛೇರಿ ವೇಳೆಯಲ್ಲಿ ತಿಳಿದುಕೊಳ್ಳಬಹುದಾಗಿದೆ ಅಥವಾ ಕಛೇರಿ ವೆಬ್‌ಸೈಟ್ www.putturtown.gov.in ನ್ನು ಸಂಪರ್ಕಿಸಬಹುದಾಗಿದೆ.

### -: ಶರ್ತಗಳು :-

1. ಸರ್ಕಾರೇತರ ಸಂಘ ಸಂಸ್ಥೆ (NGO) ಗಳು ಅಥವಾ ಏಜೆನ್ಸಿಗಳು ಮಾತ್ರ ಟೆಂಡರ್ ಸಲ್ಲಿಸಬಹುದಾಗಿದೆ.
2. ಟೆಂಡರ್ ಸಲ್ಲಿಸುವವರು ಟೆಂಡರ್ ಶೆಡ್ಯೂಲ್‌ನಲ್ಲಿ ದರ ನಮೂದಿಸುವುದು ಮತ್ತು ಟೆಂಡರ್‌ದಾರರ ಸಂಪೂರ್ಣ ವಿಳಾಸವನ್ನು ನಮೂದಿಸುವುದು.

3. ದಿನದ 24 ಗಂಟೆಗಳ ಕಾಲ 3 ಪಾಳಿಯಲ್ಲಿ ಕೆಲಸ ನಿರ್ವಹಿಸಲು ಸೂಕ್ತ ವ್ಯವಸ್ಥೆಯನ್ನು ಟೆಂಡರ್‌ದಾರರೇ ಕಲ್ಪಿಸುವುದು.
4. ಕಾರ್ಯನಿರ್ವಹಿಸಲು ಬೇಕಾಗುವ ಸಿಬ್ಬಂದಿಗಳಿಗೆ ಕಂಪ್ಯೂಟರ್ ಮಾಹಿತಿ ಇರತಕ್ಕದ್ದು.
5. ವಾರದ ಎಲ್ಲಾ ದಿನಗಳಲ್ಲೂ (ರಜಾದಿನಗಳು ಸೇರಿ) ಕಾರ್ಯನಿರ್ವಹಿಸುವುದು.
6. ಯಾವುದೇ ಸಮಯದಲ್ಲಿ ಸಾರ್ವಜನಿರಿಂದ ಬರುವ ದೂರುಗಳಿಗೆ ಕೂಡಲೇ ಸ್ಪಂದಿಸತಕ್ಕದ್ದು ಮತ್ತು ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಕಾರ್ಯನಿರ್ವಹಿಸುವುದು.
7. ಕಾರ್ಯನಿರ್ವಹಿಸಲು ಸಿಬ್ಬಂದಿಗಳ ನಿಯೋಜನೆ ಮತ್ತು ಅವರ ಸಂಪೂರ್ಣ ಜವಾಬ್ದಾರಿ ಗುತ್ತಿಗೆ ಪಡಕೊಂಡ ಟೆಂಡರ್‌ದಾರರದ್ದಾಗಿರುತ್ತದೆ.
8. ಸಿಬ್ಬಂದಿಗಳಿಗೆ ಕಛೇರಿಯಿಂದ ನೀಡಲಾದ ಫೋನ್, ಕಂಪ್ಯೂಟರ್‌ಗಳನ್ನು ಸುಸ್ಥಿಯಲ್ಲಿಡುವ ಸಂಪೂರ್ಣ ಜವಾಬ್ದಾರಿ ಗುತ್ತಿಗೆ ಪಡಕೊಂಡ ಟೆಂಡರ್‌ದಾರರದ್ದಾಗಿರುತ್ತದೆ.
9. ಈ ಬಗ್ಗೆ ಶರ್ತಗಳನ್ನು ಒಪ್ಪಿರುವ ಬಗ್ಗೆ ರೂ. 50/- ರ ಛಾಪಾ ಕಾಗದದಲ್ಲಿ ಗುತ್ತಿಗೆ ಪಡಕೊಂಡ ಟೆಂಡರುದಾರರು ಪುರಸಭೆಯೊಂದಿಗೆ ಕರಾರು ಮಾಡಿಕೊಳ್ಳತಕ್ಕದ್ದು.

ಸಹಿ/-
ಅಧ್ಯಕ್ಷರು,
ಪುರಸಭೆ ಪುತ್ತೂರು

ಸಹಿ/-
ಮುಖ್ಯಾಧಿಕಾರಿ,
ಪುರಸಭೆ ಪುತ್ತೂರು